**(ದಿನಾಂಕಃ 12.03.2026 ರಂದು ಸಾಕ್ಷಿಗೆ ಕ್ರಮಬದ್ಧವಾಗಿ ಪ್ರಮಾಣ ವಚನವನ್ನು ಬೋಧಿಸಲಾಯಿತು)**

ಮುಂದುವರಿದ ಪಾಟೀ ಸವಾಲುಃ ಪ್ರತಿವಾದಿ ಪರ ವಕೀಲರಾದ ಶ್ರೀ ಬಿ.ಎಸ್.ವಿ ರವರಿಂದ ಃ-

23. ನಮ್ಮ ಸಂಘಕ್ಕೆ ಡಿ.ಆರ್ ನಂಬರ್ 33, 34 ಅಲ್ಲದೇ ಬೇರೆ ಡಿ.ಆರ್ ನಂಬರ್ ಇರುತ್ತದೆ ಅವುಗಳ ನಂಬರ್ ನೆನಪಿರುವುದಿಲ್ಲ. ನಾನು ನಿಪಿ25 ರ ಸಬಾ ನಡುವಳಿಯನ್ನು ಜರುಗಿಸುವ ಪೂರ್ವದಲ್ಲಿ ಗ್ರಾಮ ಪಂಚಾಯ್ತಿಯವರು ನಮಗೆ ಸೇರಿದ ಡಿಮಾಂಡ್ ದಾಖಲೆಗಳನ್ನು ರದ್ದು ಪಡಿಸಿರುತ್ತಾರೆ ಎಂದು ಸೂಚಿಸಿದರೆ ಸರಿಯಲ್ಲ.

24. ನಿಪಿ26 ದಾವಾ ಆಸ್ತಿಗೆ ಸಂಬಂಧಪಟ್ಟಿರುವುದಿಲ್ಲ ಎಂದರೆ ಸರಿ. 2015 ರಿಂದ ನಮ್ಮ ದಾವಾ ಆಸ್ತಿಯ ಕಂದಾಯವನ್ನು ಕಟ್ಟಿಕೊಳ್ಳುತ್ತಿರುವುದಿಲ್ಲ ಎಂದರೆ ಸರಿ. ನಾನು ಹಾಜರುಪಡಿಸಿದ ನಿಪಿ27 ಕ್ಕೆ ಈ ಪ್ರಸ್ತುತ ಪ್ರಕರಣದಲ್ಲಿರುವ ಪ್ರತಿವಾದಿಗಳು ಅದರಲ್ಲಿ ಪಾರ್ಟಿಗಳಾಗಿರುವುದಿಲ್ಲ ಎಂದರೆ ಸರಿ.

25. ನಿಪಿ27 ನಮ್ಮ ಮತ್ತು ನಮ್ಮ ಸಂಘದ ಸದ್ಯಸರ ಮಧ್ಯ ಅಸಲು ದಾವಾ ಸಂಖ್ಯೆ 145/2013 ಅನ್ನು ದಾಖಲಿಸಿರುತ್ತೇವೆ ಎಂದರೆ ಸರಿ. ನಿಪಿ29 ಪ್ರತಿವಾದಿಳಿಗೆ ಸಂಬಂಧಪಟ್ಟಿರುವುದಿಲ್ಲ ಎಂದು ಸೂಚಿಸಿದರೆ ಸಾಕ್ಷಿಯು ತನಗೆ ಗೊತ್ತಿರುವುದಿಲ್ಲ ಎಂದು ನುಡಿಯುತ್ತಾರೆ.

26. ನಿಪಿ32 ನಮ್ಮ ಸಂಘಕ್ಕೆ ಸಂಬಂಧಪಟ್ಟಿರುವುದಿಲ್ಲ ಎಂದು ಸೂಚಿಸಿದರೆ ಸರಿಯಲ್ಲ. ಸಾಕ್ಷಿಗೆ ಮೂರು ಡಿಮಾಂಡ್ ಎಕ್ಸಟ್ರಾಕ್ಟ ದಾಖಲೆಯನ್ನು ತೋರಿಸಿ ಅದರಲ್ಲಿ ಡಿ.ಆರ್ ನಂಬರ್ 33 ಮತ್ತು 34 ಖಾಲಿ ನಿವೇಶನ ಮತ್ತು ಸರ್ಕಾರಿ ಆಸ್ಪತ್ರೆ ಇರುತ್ತದೆ ಎಂದು ಸೂಚಿಸಿದರೆ ಸರಿ. ಸಾಕ್ಷಿಯು ಅವುಗಳನ್ನು ನೋಡಿ ಗುರುತಿಸಿದ್ದರಿಂದ ಅವುಗಳನ್ನು ಒಟ್ಟಾಗಿ ನಿಡಿ1 ಎಂದು ಗುರುತಿಸಲಾಯಿತು.

27. ಡಿಮಾಂಡ್ ಎಕ್ಸಟ್ರಾಕ್ಟ 33 ಮತ್ತು 34 ರ 2024 ರಿಂದ 2026 ರವರೆಗೆ ಗ್ರಾಮ ಪಂಚಾಯ್ತಿ ಖಾಲಿ ನಿವೇಶನ ಇರುತ್ತದೆ ಎಂದು ಸೂಚಿಸಿದರೆ ಸರಿಯಲ್ಲ. ಗ್ರಾಮ

ಪಂಚಾಯ್ತಿಯವರು ನಮ್ಮ ಖಾತೆಯನ್ನು ರದ್ದು ಪಡಿಸಿರುವುದಕ್ಕೆ ಸೂಕ್ತ ಕಾರ್ಯಲಯದ ಮುಂದೆ ಮೇಲ್ಮನವಿಯನು್ನ ಸಲ್ಲಿಸಿರುವುದಿಲ್ಲ ಎಂದರೆ ಸರಿ.

28. ನಮ್ಮ ಸಂಘಕ್ಕೆ ಆಸ್ತಿಯನ್ನು ಹೊಂದುವುದು, ಅದರ ಮಾಲಿಕತ್ವ ಅಥವಾ ಸ್ವಾಧೀನವನ್ನು ಹೊಂದುವ ಅಧಿಕಾರವನ್ನು ಹೊಂದಿರುವುದಿಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಇರುವುದಿಲ್ಲ.**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು).

ಓ. ಹೇ. ಕೇ. ಸ. ಎಂ. ಒ.

ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಹೊಸನಗರ.